**File No.ITBT/9/PRM/2020-SO-ITBT SEC**

ಕರ್ನಾಟಕ ಸರ್ಕಾರ

ಸಂಖ್ಯೆ: ಐಟಿಬಿಟಿ 09 ಪಿಆರ್‌ಎಂ 2020

ಕರ್ನಾಟಕ ಸರ್ಕಾರ ಸಚಿವಾಲಯ
ಕೊಠಡಿ ಸಂಖ್ಯೆ: 504, 5 ನೇ ಹಂತ,
5 ನೇ ಮಹಡಿ, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:03.11.2020
04.

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಗೆ,

1. ನಿರ್ದೇಶಕರು, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕತಂತ್ರಜ್ಞಾನ ನಿರ್ದೇಶನಾಲಯ, ಶಾಂತಿನಗರ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕಿಟ್ಸ್, ಶಾಂತಿನಗರ, ಬೆಂಗಳೂರು - 560 027.
3. ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್, ಶಾಂತಿನಗರ ಬೆಂಗಳೂರು – 560 027
4. ವ್ಯವಸ್ಥಾಪಕ ನಿರ್ದೇಶಕರು, ಕೆಸ್ವೈಪ್ಸ್, ಬನಶಂಕರಿ, ಬೆಂಗಳೂರು.

K-STePS No: 937
Date: 5/11/2020

ಮಾನ್ಯರೆ,

ವಿಷಯ: ಜೈವಿಕ ವೈವಿಧ್ಯ ಅಧಿನಿಯಮ 2002 ರ 49(1) ನೇ ಪ್ರಕರಣದ ನಿರ್ದೇಶನಗಳ ಕುರಿತು.

ಉಲ್ಲೇಖ: ದಿನಾಂಕ: 23.09.2020 ರ ಪತ್ರ ಸಂಖ್ಯೆ:TEC/ CO1/Govt correspondence/ 17-/312 ಸದಸ್ಯ ಕಾರ್ಯದರ್ಶಿ, ಕರ್ನಾಟಕ ಜೀವ ವೈವಿಧ್ಯ ಮಂಡಳಿ ರವರ ಪತ್ರ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರ ಮತ್ತು ಅಡಕಗಳನ್ನು ಇದರೊಂದಿಗೆ ಲಗತ್ತಿಸಿದೆ. ಜೈವಿಕ ವೈವಿಧ್ಯ ಅಧಿನಿಯಮ, 2002 ರ 49(1) ರನ್ವಯ ಕಾಯ್ದೆಯ ನಿಬಂದನೆಗಳನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಕರ್ನಾಟಕ ಸರ್ಕಾರವು ಕೆಲವೊಂದು ನಿರ್ದೇಶನಗಳನ್ನು ನೀಡಿದ್ದು, ಇಲಾಖೆಯ ವ್ಯಾಪ್ತಿಗೊಳಪಡುವ ಘಟಕಗಳು/ಕಂಪನಿಗಳಿಗೆ ವೆಬ್‌ಸೈಟ್ ಸುತ್ತೋಲೆಗಳ ಮುಖಾಂತರ ಪ್ರಕಟಿಸುವಂತೆ ಕರ್ನಾಟಕ ಜೀವ ವೈವಿದ್ಯ ಮಂಡಳಿಯ ಕೋರಿರುವ ಹಿನ್ನಲೆಯಲ್ಲಿ ಅಗತ್ಯ ಕ್ರಮವಹಿಸುವಂತೆ ತಮಗೆ ತಿಳಿಸಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

4/11

(ವನಶ್ರೀ ಟಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

4/11/2020

ಪ್ರತಿ: ಸರ್ಕಾರದ ಉಪ ಕಾರ್ಯದರ್ಶಿ, ವಿ&ತಂ ವಿಭಾಗ – ಮಾಹಿತಿಗಾಗಿ.

04/XI

ಕರ್ನಾಟಕ ಸರ್ಕಾರ
ಕರ್ನಾಟಕಜೀವವೈವಿಧ್ಯ ಮಂಡಳಿ
(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ)

ಸಂಖ್ಯೆ: TEC/C01/Govt Correspondence/17-18/312 ದಿನಾಂಕ: 23.09.2020

ರವರಿಗೆ,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕರ್ನಾಟಕ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ತಂತ್ರಜ್ಞಾನ ಇಲಾಖೆ,
6ನೇ ಮಹಡಿ, 5ನೇ ಹಂತ, ಬಹುಮಹಡಿಗಳ ಕಟ್ಟಡ,
ಅಂಬೇಡ್ಕರ್ ವೀದಿ,
ಬೆಂಗಳೂರು-01.

ಮಾನ್ಯರೇ,

ವಿಷಯ : ಜೈವಿಕ ವೈವಿಧ್ಯ ಅಧಿನಿಯಮ 2002ರ 49(1), ನೇ ಪ್ರಕರಣದ ನಿರ್ದೇಶನಗಳ ಕುರಿತು.

ಉಲ್ಲೇಖ : ಕರ್ನಾಟಕ ಸರ್ಕಾರ (ಜೀವಿಪರಿಸ್ಥಿತಿ ಮತ್ತು ಪರಿಸರ) ಅರಣ್ಯ ಪರಿಸರ ಮತ್ತು ಜೀವಿಪರಿಸ್ಥಿತಿ ಇಲಾಖೆರವರ ಪತ್ರ ಸಂಖ್ಯೆ: ಅಪಜೀ 154 ಇಎನ್‌ವಿ 2018 ದಿನಾಂಕ :15.09.2020.

******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರವು ಜೈವಿಕ ವೈವಿಧ್ಯ ಅಧಿನಿಯಮ 2002ರ 49(1) ರನ್ವಯ, ಕಾಯ್ದೆಯ ನಿಬಂಧನೆಗಳನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಕೆಲವು ನಿರ್ದೇಶನಗಳನ್ನು ನೀಡಲಾಗಿದೆ.

ಈ ನಿರ್ದೇಶನದಂತೆ, ಕಾಯ್ದೆಯ ನಿಬಂಧನೆಗಳು ಮತ್ತು ನಿಯಮಗಳನ್ನು ಪಾಲಿಸಲು ಅಪೇಕ್ಷಿತರಾಗಿರುವ ಪ್ರಕರಣ 7ರಡಿಯ ರಾಜ್ಯ ವ್ಯಾಪ್ತಿಯಲ್ಲಿ ಬರುವ ಜೈವಿಕ ಸಂಪನ್ಮೂಲಗಳನ್ನು ಭಾರತದ ಎಲ್ಲಾ ನಾಗರೀಕರಿಗೂ/ಸಂಸ್ಥೆಗಳು, ಕರ್ನಾಟಕ ಜೀವ ವೈವಿಧ್ಯ ಮಂಡಳಿಗೆ ಅರ್ಜಿ ನಮೂನೆ-1 ರಲ್ಲಿ ಪೂರ್ವ ಮಾಹಿತಿಯನ್ನು ಈ ನಿರ್ದೇಶನ ಹೊರಡಿಸಿದ 60 ದಿನಗಳೊಳಗಾಗಿ (ದಿನಾಂಕ: 15.09.2020 ರಿಂದ 15.11.2020 ರವರೆಗೆ) ಸಲ್ಲಿಸತಕ್ಕದ್ದು.

ಜೈವಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ಅರ್ಜಿ ನಮೂನೆ-1 ಅನ್ನು ಘಟನೋತ್ತರ ಅನುಮೋದನೆಗಾಗಿ (Ex-post facto) ಸಲ್ಲಿಸುವ ಎಲ್ಲಾ ಅರ್ಜಿಗಳನ್ನು ಮಂಡಳಿಯು ವಿಚಾರಣೆ ಮೂಲಕ ಪರಿಶೀಲಿಸುವುದು ಹಾಗೂ ಸೂಕ್ತವಾದ ಮತ್ತು ಸಮಂಜಸವಾದ ಸಮರ್ಥನೆಗಳನ್ನು ಮತ್ತು ಕಾರಣಗಳನ್ನು ದಾಖಲಿಸಿದ್ದಲ್ಲಿ, ಇಂತಹ ಅರ್ಜಿಗಳು ಮಂಡಳಿಗೆ ಒಪ್ಪಿಗೆಯಾದಲ್ಲಿ ಮಾತ್ರ ಅನುಮೋದನೆ ನೀಡಬಹುದು.

ಮುಂದುವರೆದು, ಹಿಂದಿನ ಪ್ರಕರಣಗಳ ಬಗ್ಗೆ ತೆಗದುಕೊಳ್ಳಬೇಕಾದ ಕ್ರಮಗಳು ಸೇರಿದಂತೆ ಮಂಡಳಿಯು ಈ ನಿರ್ದೇಶನ ಹೊರಡಿಸಿದ 60 ದಿನಗಳೊಳಗಾಗಿ ಸೂಕ್ತ ನಿರ್ಧಾರಗಳನ್ನು ಮತ್ತು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಎಂದು ನಿರ್ದೇಶಿಸಿದೆ.

ನೆಲ ಮಹಡಿ, "ವನವಿಕಾಸ" 18ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು-03.
ದೂರವಾಣಿ : 080- 23448783, ಫ್ಯಾಕ್ಸ್ : 080-23440535 ಇ-ಮೇಲ್ : kbb-ka@nic.in

DeitY, BT, S&T ACS 14752/2 Date 1/10

ಆದ್ದರಿಂದ, ತಮ್ಮ ಇಲಾಖೆಯಿಂದ ಪರವಾನಗಿ ಪಡೆದುಕೊಂಡು, ಕರ್ನಾಟಕದ ಜೈವಿಕ ಸಂಪನ್ಮೂಲಗಳನ್ನು ವಾಣಿಜ್ಯ ಬಳಕೆಗಾಗಿ ಉಪಯೋಗಿಸುತ್ತಿರುವ ಎಲ್ಲಾ ಘಟಕಗಳಿಗೆ ಫಾರಂ-1 ಮತ್ತು ಲಾಭ ಮತ್ತು ನ್ಯಾಯ ಸಮ್ಮತ ಹಂಚಿಕೆಯ ಭಾದ್ಯತೆಗಳನ್ನು ಸಲ್ಲಿಸಲು ಹಾಗೂ ನಿಬಂಧನೆಗಳನ್ನು ಅನುಸರಿಸುವುದು. ಸದರಿ ಕಾಯ್ದೆಯನ್ನು ಉಲ್ಲಂಘಿಸಿದ್ದಲ್ಲಿ, ಮಂಡಳಿಯು ಪ್ರಕರಣ 55 ಹಾಗೂ 56ರನ್ವಯ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕೃತ ಸುತ್ತೋಲೆಯನ್ನು ಹೊರಡಿಸಲು ವಿನಂತಿಸಲಾಗಿದೆ.

ಸರ್ಕಾರದ ನಿರ್ದೇಶನದ ಪ್ರತಿಯನ್ನು (ಕನ್ನಡ ಹಾಗೂ ಆಂಗ್ಲ) ಈ ಪತ್ರದೊಂದಿಗೆ ಲಗತ್ತಿಸುತ್ತಾ, ತಮ್ಮ ಇಲಾಖೆಗೆ ಒಳಪಡುವ ಘಟಕಗಳು/ಕಂಪನಿಗಳಿಗೆ ವೆಬ್‌ಸೈಟ್ ಮತ್ತು ಸುತ್ತೋಲೆ ಮುಖಾಂತರ ಪ್ರಕಟಿಸಬೇಕೆಂದು ತಮ್ಮನ್ನು ಕೋರಲಾಗಿದೆ.

ತಮ್ಮ ವಿಶ್ವಾಸಿ,

29.9.2020

ಸದಸ್ಯ ಕಾರ್ಯದರ್ಶಿ
ಕರ್ನಾಟಕ ಜೀವವೈವಿಧ್ಯ ಮಂಡಳಿ

ಲಗತ್ತು : ಜೈವಿಕ ವೈವಿಧ್ಯ ಅಧಿನಿಯಮ 2002 ರ 49(1) ನೇ ಪ್ರಕರಣದ ನಿರ್ದೇಶನ ಪ್ರತಿ.

# GOVERNMENT OF KARNATAKA

No. FEE 154 ENV 2018

Karnataka Government Secretariat,
M. S. Building,
Bangalore, dated: 15.09.2020.

## Directions under Section 49(1) of the Biological Diversity Act, 2002

*******

The Biological Diversity Act, 2002 (hereinafter referred to as the "Act") came into force in 2003 for conservation of biological diversity, sustainable use of its components and fair and equitable benefits arising out of the use of biological resources, knowledge and for matters connected therewith and incidental thereto. The Biological Diversity Rules, 2005 were introduced by the Ministry of Environment, Forest and Climate Change to facilitate the implementation of the Act.

Whereas, the Karnataka Biodiversity Board (hereinafter referred to as the "Board") was established as per Section 22 of the Biological Diversity Act, 2002 in June 2003 and started functioning from 1st August 2003. The Government of Karnataka also notified the Karnataka Biological Diversity Rules in 2005 vide G.O no. FEE 151 ENV 2005 dated 3rd May 2006 as per the powers conferred under the Section 63 of the Biological Diversity Act, 2002. The Government of Karnataka has made certain amendments to the Karnataka Biological Diversity Rules, 2005 vide G.O no. FEE 106 ENV 2014 dated 29/08/2016. It is also to be noted that the Guidelines on Access to Biological Resources and Associated Knowledge and Benefits Sharing Regulations only came into force in 2014 and clarity with respect to the procedure to be followed for examination and processing of the applications submitted by the Indian citizens/entities registered in India who fall under section 7 of the said act, came only after these Guidelines in 2014.

Whereas, one of the functions of the State Biodiversity Board under Section 23(b) of the Act is to regulate by granting of approvals or otherwise requests for commercial utilization or bio-survey and bio-utilization of any biological resource by Indians. Further Section 23(c) of the Act empowers the State Biodiversity Boards to perform such other functions as may be necessary to carry out the provisions of this Act or as may be prescribed by the State Government. Also Rule 13(i) of the Karnataka Biological Diversity Rules, 2005 empowers the Board to lay down the procedure and guidelines to govern the activities provided under section 23 of the Act and Rule 13 (xxii) of the Karnataka Bio-diversity Rules 2005 gives the Board the authority to perform such other functions, as may be necessary to carry out the provisions of the Act or as may be prescribed by the State Government from time to time.

Whereas, the Ministry of Environment, Forest and Climate Change has issued directions to the National Biodiversity Authority vide office memorandum No. F. N. C. - 12025/8/15-CS-III dated 10th September 2018. In this direction it has been contemplated that it has been brought to the notice of the Ministry of Environment, Forest and Climate Change by the National Biodiversity Authority that a large number of entities are not fully aware of the provision of the act but are desirous of complying with the same. Thus, there is a need to provide an opportunity to all such entities which are required to obtain prior approval of the authority for undertaking activities as specified under sections 3, 4 and 6 of the act, including cases that may relate to past, in line with the objectives of the act and regulate them in a manner that enhances implementation of the act. Therefore Ministry of Environment, Forest and Climate Change has issued directions to National Biodiversity Board that all such cases where prior approval was required but a person/entity has not obtained such approval, shall be heard by the Authority, which shall then pass appropriate orders with respect to acts that may have occurred in the past, taking into account scientific evidence as well as any damage that might have been caused in furtherance of the powers available to the Authority under Section 18 of the Act, with the objective of ensuring conservation and sustainable use of biodiversity and fair and equitable sharing of benefits arising from its use. The Authority shall consider all such cases on the basis of merit and shall ensure that only those cases are granted approval for future activities which would have otherwise been approved in the normal course, had the person/entity concerned applied in time for prior approval. The Central Government further directs the Authority to take decisions thereon within a period of 60 days from the date of issuance of this office Memorandum, including course of action for matters related to past. The Ministry further directs the Authority to continue to spread awareness about the act to various stakeholders to avoid the occurrence of such activities.

Whereas, further the chairperson of National Biodiversity Authority directs the all state biodiversity boards to take action to spread awareness about the Biological diversity Act to various stakeholders and to enhance the implementation of the Biological diversity act, vide D O Letter No.NBA/Law Gen/28/12/13/18-19/3007, dated: 8th November 2018.

Whereas, the Biological Diversity Act, 2002 lays down the procedure for taking cognizance of matters relating to the Act. Section 61 of the Act provides that cognizance of any offence under the Act can be taken only by the Central Government or officers authorized in this behalf by the Central Government which includes Officers of the State Biodiversity Board, not below the rank of Scientist 'C' (S.O. 2708 (E) dated 17.11. 2008) and also Forest Officers not below the rank of Range Officers in their respective jurisdictions (as per the Notification S.O 120 (E) dated 7th January 2009).

Whereas, Indian citizens/entities are required to give prior intimation to the Board as per section 7 of the Biological Diversity Act. 'Prior intimation' entails that the Indian citizens/entities must apply to the Board under Form I of the State Rules before they

access biological resources. But it has been realized that quite a few of such Indian citizens/entities either approach the Board late or do not approach the Board at all for complying with the provisions of the Act, even if they are desirous to do so. Hence, taking into consideration the bonafideness of the Indian citizens/entities desirous of complying with the Act and in furtherance of not imposing sanction on its citizens/ entities and individuals, who have in good faith approached the Board, without having the knowledge or deliberate intention of violating the provisions of the Act, shall be given a window of opportunity of 60 days to comply with the provisions of the Act.

Wherefore, taking into account all the above facts and provisions, the Government of Karnataka, in exercise of its powers under Section 49 of the Act, hereby issues the following directions:

1. All citizens of India and Indian entities who fall under the ambit of Section 7, who are desirous to comply with the provisions of the Biological Diversity Act and Rules can give prior intimation to the Karnataka State Bio-diversity Board by making an application in Form I within a period of 60 days from the date of issuance of this direction.

2. Also taking into account that the Guidelines on Access to Biological Resources and Associated Knowledge and Benefits Sharing Regulations only came into force in 2014, a window of opportunity for compliance of the Act from date: 15.09.2020 to date: 15.11.2020 is to be provided. This window of opportunity in provided to the acts and approvals that were required to be obtained in the past subject to certain restrictions.

3. All such applications in Form I for ex post facto approvals will be scrutinized by the Board in a hearing and only on adequate and reasonable justification and by recording the reasons, the Board, if satisfied, may permit the application. The Board shall consider all such cases of ex post facto approvals on the basis of merit and shall ensure that only such cases are granted approval for future activities, which would have otherwise been approved in the normal course, had the Indian citizen/entity concerned applied in time for the prior approval.

4. The Board shall ensure that the Principles of Natural Justice such as fair hearing and a reasoned decision by the authority is strictly adhered to.

Further the Government of Karnataka directs the Board to take decisions thereon within a period of 60 days from the date of issuance of this order, including the course of action for matters related to the past.

These directions shall come into force with immediate effect.

These directions are intended to facilitate and enhance implementation of the act ir public interest towards meeting the objectives of the acts, namely, conservation of biological diversity, sustainable use of its components, and fair and equitable sharing of the benefits arising from commercial use.

This issues with the approval of the Competent Authority.

By Order and in the name of the
Governor of Karnataka

15/09/2020
**(Muralidhar S Tallikeri)**
Under Secretary to the Government,
(Ecology and Environment)
Forest, Ecology and Environment Department

**To;**

1. The Member Secretary, Karnataka Biodiversity Board, Vana Vikasa Building, 18th Cross, Malleshwaram, Bengaluru.
2. PS to Hon'ble Minister for Forest, Ecology and Environment, Vikasasoudha, Bangalore.
3. PS to chief secretary to Government of Karnataka, Vidhana Soudha, Bangalore.
4. PS to Additional Chief Secretary to Government, Forest, Ecology and Environment. M S Building, Bangalore.
5. PS to Principal Secretary to Government (Ecology & Environment), Forest, Ecology & Environment Department, M. S. Building, Bangalore.
6. SGF / Spare Copies.

KARNATAKA BIODIVERSITY ... BANGALORE
1595
16/09/2020

# ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 154 ಇಎನ್‌ವಿ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 15.09.2020.

## ಜೈವಿಕ ವೈವಿಧ್ಯ ಅಧಿನಿಯಮ, 2002ರ 49(1)ನೇ ಪ್ರಕರಣದನ್ವಯ ನಿರ್ದೇಶನ

* * * * *

ಜೈವಿಕ ವೈವಿಧ್ಯತೆಯ ಸಂರಕ್ಷಣೆಗಾಗಿ, ಅವುಗಳ ಸುಸ್ಥಿರ ಬಳಕೆಗಾಗಿ ಹಾಗೂ ಜೈವಿಕ ಸಂಪನ್ಮೂಲಗಳ ಮತ್ತು ಅವುಗಳ ಜ್ಞಾನದ ಬಳಕೆಯಿಂದ ದೊರೆಯುವ ಪ್ರಯೋಜನಗಳನ್ನು ನಿಷ್ಪಕ್ಷಪಾತವಾಗಿ ಮತ್ತು ನ್ಯಾಯಸಮ್ಮತವಾಗಿ ಹಂಚಿಕೊಳ್ಳುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದಂತೆ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ ಜೈವಿಕ ವೈವಿಧ್ಯ ಅಧಿನಿಯಮ, 2002 (ಇನ್ನು ಮುಂದೆ 'ಅಧಿನಿಯಮ' ಎಂದು ಉಲ್ಲೇಖಿಸಲಾಗಿದೆ) 2003ರಲ್ಲಿ ಜಾರಿಗೆ ಬಂದಿದೆ. ಅಧಿನಿಯಮದ ಜಾರಿಗಾಗಿ ಕೇಂದ್ರ, ಪರಿಸರ ಮತ್ತು ಅರಣ್ಯ ಹವಾಮಾನ ಬದಲಾವಣೆ ಸಚಿವಾಲಯವು ಜೀವ ವೈವಿಧ್ಯ ನಿಯಮಗಳು 2005ನ್ನು ಅಧಿಸೂಚಿಸಿರುತ್ತದೆ.

ಜೈವಿಕ ವೈವಿಧ್ಯ ಅಧಿನಿಯಮ, 2002ರ 22ನೇ ಪ್ರಕರಣದನ್ವಯ ಜೂನ್ ತಿಂಗಳು 2003ರಲ್ಲಿ ಕರ್ನಾಟಕ ಜೀವವೈವಿಧ್ಯ ಮಂಡಳಿಯನ್ನು (ಇನ್ನು ಮುಂದೆ 'ಮಂಡಳಿ' ಎಂದು ಉಲ್ಲೇಖಿಸಲಾಗಿದೆ) ಸ್ಥಾಪಿಸಲಾಗಿದೆ ಹಾಗೂ ಈ ಮಂಡಳಿಯು ಆಗಸ್ಟ್ 1, 2003 ರಿಂದ ಕಾರ್ಯಾರಂಭಗೊಂಡಿರುತ್ತದೆ. ಜೈವಿಕ ಅಧಿನಿಯಮ, 2002ರ ಸೆಕ್ಷನ್ 63 ರಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ಕರ್ನಾಟಕ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಇಇ 151 ಇಎನ್‌ವಿ 2005 ದಿನಾಂಕ 3ನೇ ಮೇ 2006ರಲ್ಲಿ ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು, 2005ನ್ನು ಅಧಿಸೂಚಿಸಿರುತ್ತದೆ. ಕರ್ನಾಟಕ ಸರ್ಕಾರವು ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು, 2005ಕ್ಕೆ ಕೆಲವೊಂದು ತಿದ್ದುಪಡಿಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಇಇ 106 ಇಎನ್‌ವಿ 2014 ದಿನಾಂಕ 29/8/2016 ರಲ್ಲಿ ಮಾಡಿರುತ್ತದೆ.

ಮುಂದುವರೆದು, ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಸಂಬಂಧಿತ ಜ್ಞಾನ ಮತ್ತು ಲಾಭ ಹಂಚಿಕೆಯ ಮಾರ್ಗಸೂಚಿಗಳು 2014ರಲ್ಲಿ ಜಾರಿಗೆ ಬಂದಿರುತ್ತದೆ. ಇದರನ್ವಯ ಭಾರತೀಯ ನಾಗರೀಕರು ಅಥವಾ ಭಾರತದಲ್ಲಿ ನೋಂದಣಿಯಾಗಿರುವ ಸಂಸ್ಥೆಗಳು ಈ ಮೇಲಿನ ಅಧಿನಿಯಮದ ಪ್ರಕರಣ 7 ರಡಿಯಲ್ಲಿ ಸಲ್ಲಿಸಿರುವ ಅರ್ಜಿಗಳ ಪರಿಶೀಲನೆ ಮತ್ತು ಪ್ರಕ್ರಿಯೆಗಳ ನಂತರ ಅನುಸರಿಸಬೇಕಾದ ಪದ್ಧತಿಯು 2014ರ ಈ ಮಾರ್ಗಸೂಚಿಗಳ ನಂತರವೇ ಜಾರಿಗೆ ಬಂದಿರುತ್ತದೆ.

ಯಾವುದೇ ಜೈವಿಕ ಸಂಪನ್ಮೂಲಗಳನ್ನು ವಾಣಿಜ್ಯ ಬಳಕೆಗಾಗಿ ಅಥವಾ ಜೈವಿಕ ಸಮೀಕ್ಷೆಗಾಗಿ ಮತ್ತು ಜೈವಿಕ ಬಳಕೆಗಾಗಿ ಭಾರತೀಯರಿಗೆ ಅನುಮೋದನೆಗಳನ್ನು ಮಂಜೂರು ಮಾಡುವ ಮೂಲಕ ಅಥವಾ ಅನ್ಯಥಾ ಅವರ ಕೋರಿಕೆಗಳನ್ನು ಮಂಜೂರು ಮಾಡುವ ಮೂಲಕ ನಿಯಂತ್ರಿಸುವುದು, ಈ ಕಾಯ್ದೆಯ ಪ್ರಕರಣ 23(ಬಿ) ರನ್ವಯ ರಾಜ್ಯದ ಜೀವವೈವಿಧ್ಯ ಮಂಡಳಿಯ ಪ್ರಕಾರ್ಯವಾಗಿರುತ್ತದೆ. ಮುಂದುವರೆದು, ಕಾಯ್ದೆಯ ಪ್ರಕರಣ 23(ಸಿ) ರನ್ವಯ ಈ ಕಾಯ್ದೆಯ ನಿಬಂಧನೆಗಳನ್ನು ಪಾಲಿಸಲು ಅಗತ್ಯವಾಗಬಹುದಾದಂತಹ ಅಥವಾ ರಾಜ್ಯ ಸರ್ಕಾರವು ನಿಗಧಿಪಡಿಸಬಹುದಾದಂಥಹ ಇತರೆ ಪ್ರಕಾರ್ಯಗಳನ್ನು ನಿರ್ವಹಿಸಲು ರಾಜ್ಯ ಜೀವವೈವಿಧ್ಯ ಮಂಡಳಿಗೆ ಅಧಿಕಾರ ನೀಡಲಾಗಿದೆ. ಅಧಿನಿಯಮದ ಪ್ರಕರಣ 23 ರಡಿ ತಿಳಿಸಲಾಗಿರುವ ಕಾರ್ಯ

ಚಟುವಟಿಕೆಗಳಿಗೆ ಸಂಬಂಧಿಸಿದ ಕಾರ್ಯವಿಧಾನ ಮತ್ತು ಮಾರ್ಗಸೂಚಿಗಳನ್ನು ರೂಪಿಸುವ ಅಧಿಕಾರವನ್ನು ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು 2005ರ ನಿಯಮ 13(1) ರಲ್ಲಿ ಮಂಡಳಿಗೆ ನೀಡಲಾಗಿದೆ ಹಾಗೂ ನಿಯಮ 13(22) ರಲ್ಲಿ ಕಾಲಕಾಲಕ್ಕೆ ಸರ್ಕಾರವು ನಿರ್ದೇಶಿಸುವ ಅಥವಾ ಅಧಿನಿಯಮವು ಸೂಚಿಸುವ ಇತರ ಅಗತ್ಯವೆನಿಸುವ ಪ್ರಕಾರ್ಯಗಳನ್ನು ಕೈಗೊಳ್ಳುವ ಅಧಿಕಾರವನ್ನು ಮಂಡಳಿಗೆ ನೀಡಲಾಗಿದೆ.

ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯವು ದಿನಾಂಕ 10ನೇ ಸೆಪ್ಟೆಂಬರ್ 2018 ರಂದು ಅಧಿಕೃತ ಜ್ಞಾಪನ ಸಂಖ್ಯೆ: ಎಫ್.ಎನ್.ಸಿ–12025/8/15–ಸಿಎಸ್–III ರಲ್ಲಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈರವರಿಗೆ ನಿರ್ದೇಶನಗಳನ್ನು ನೀಡಿರುತ್ತದೆ. ಬಹಳಷ್ಟು ಸಂಖ್ಯೆಯ ಕಂಪನಿ/ ಘಟಕಗಳಿಗೆ ಜೈವಿಕ ವೈವಿಧ್ಯ ಕಾಯಿದೆ ಹಾಗೂ ಅದರ ನಿಬಂಧನೆಗಳ ಬಗ್ಗೆ ಸಂಪೂರ್ಣ ಅರಿವಿಲ್ಲವಾದರೂ ಸಹ ಕಾಯ್ದೆಯ ನಿಬಂಧನೆಗಳನ್ನು ಅನುಸರಿಸಲು ಸಿದ್ದರಿದ್ದಾರೆ ಎಂಬುದರ ಬಗ್ಗೆ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವು ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯದವರ ಗಮನಕ್ಕೆ ತರಲಾಗಿದೆ ಎಂದು ಈ ನಿರ್ದೇಶನದಲ್ಲಿ ಪ್ರಸ್ತಾಪಿಸಲಾಗಿದೆ. ಸದರಿ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಹಿತದೃಷ್ಟಿಯಿಂದ ಜೈವಿಕ ವೈವಿಧ್ಯ ಅಧಿನಿಯಮ, 2002ರ ಪ್ರಕರಣದ 3, 4 ಮತ್ತು 6 ರಡಿಯಲ್ಲಿ ನಿರ್ದಿಷ್ಟಪಡಿಸಿರುವ ಚಟುವಟಿಕೆಗಳನ್ನು ಕೈಗೊಳ್ಳುವ ಮುನ್ನ ಪೂರ್ವ ಮಾಹಿತಿಯನ್ನು (Prior Intimation) ನೀಡಬೇಕಾಗಿರುವಂತಹ ಕಂಪನಿ/ ಘಟಕಗಳಿಗೆ ಹಿಂದಿನ ಪ್ರಕರಣಗಳು ಸೇರಿದಂತೆ ಕಾಯ್ದೆಯ ಉದ್ದೇಶಗಳಿಗೆ ಅನುಗುಣವಾಗಿ ಅಧಿನಿಯಮದನುಸಾರ ಮಾಹಿತಿಯನ್ನು ನೀಡಲು ಅವಕಾಶವನ್ನು ಕಲ್ಪಿಸುವ ಅಗತ್ಯ ಕಂಡುಬಂದಿರುತ್ತದೆ. ಆದ್ದರಿಂದ ಜೀವ ವೈವಿಧ್ಯತೆಯ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆಯಲ್ಲಿ ಖಾತರಿಪಡಿಸುವ ಉದ್ದೇಶ ಮತ್ತು ಅದರ ಬಳಕೆಯಿಂದ ಉಂಟಾಗುವ ಪ್ರಯೋಜನಗಳ ಲಾಭ ಮತ್ತು ನ್ಯಾಯಸಮ್ಮತ ಹಂಚಿಕೆಗಳ ಉದ್ದೇಶಕ್ಕಾಗಿ ಸಂಬಂಧಿಸಿದ ವ್ಯಕ್ತಿ ಘಟಕಗಳು ಪೂರ್ವಾನುಮತಿ ಪಡೆದುಕೊಳ್ಳುವ ಅಗತ್ಯವಿದ್ದರೂ ಸಹ ಪೂರ್ವಾನುಮತಿಯನ್ನು ಪಡೆದುಕೊಳ್ಳದಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ, ಪ್ರಾಧಿಕಾರವು ಅಂತಹ ವ್ಯಕ್ತಿ/ ಘಟಕಗಳಿಗೆ ತನ್ನ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿ, ಈ ಪ್ರಕರಣಗಳ ವೈಜ್ಞಾನಿಕ ಪುರಾವೆಗಳನ್ನು ಹಾಗೂ ಯಾವುದೇ ಹಾನಿ ಸಂಭವಿಸಿರಬಹುದಾದ ಮಾಹಿತಿಯನ್ನು ಗಣನೆಗೆ ತೆಗೆದುಕೊಂಡು ಅಧಿನಿಯಮದ ಸೆಕ್ಷನ್ 18 ರಲ್ಲಿ ಪ್ರಾಧಿಕಾರಕ್ಕೆ ಇರುವ ಅಧಿಕಾರದನ್ವಯ ಈ ಪ್ರಕರಣಗಳಿಗೆ ಸೂಕ್ತ ಆದೇಶವನ್ನು ಹೊರಡಿಸುವಂತೆ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರಕ್ಕೆ ನಿರ್ದೇಶನವನ್ನು ನೀಡಿರುತ್ತದೆ. ಪ್ರಾಧಿಕಾರವು ಇಂತಹ ಪ್ರಕರಣಗಳನ್ನು ಅರ್ಹತೆಯ ಆಧಾರದ ಮೇಲೆ ಪರಿಗಣಿಸತಕ್ಕದ್ದು ಹಾಗೂ ಯಾವ ವ್ಯಕ್ತಿ/ ಘಟಕವು ಸಾಮಾನ್ಯವಾಗಿ ಪೂರ್ವಾನುಮತಿಗಾಗಿ ನಿಗದಿತ ಸಮಯದಲ್ಲಿ ಅರ್ಜಿ ಸಲ್ಲಿಸಿದಾಗ ಪೂರ್ವಾನುಮತಿ ನೀಡಬಹುದಾದಂತಹ ಪ್ರಕರಣಗಳಲ್ಲಿ ಮಾತ್ರ ಭವಿಷ್ಯದ ಚಟುವಟಿಕೆಗಳಿಗಾಗಿ ಅನುಮತಿ ನೀಡುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಈ ನಿರ್ದೇಶನ ಹೊರಡಿಸಿದ ದಿನಾಂಕದಿಂದ 60 ದಿನಗಳ ಅವಧಿಯಲ್ಲಿ ಹಿಂದಿನ ಪ್ರಕರಣಗಳಿಗೆ ಸಂಬಂಧಿಸಿದ ಕ್ರಿಯೆಗಳು ಸೇರಿದಂತೆ, ಅವುಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಂತೆ ಕೇಂದ್ರ ಸರ್ಕಾರವು ಪ್ರಾಧಿಕಾರಕ್ಕೆ ನಿರ್ದೇಶಿಸಿರುತ್ತದೆ. ಇಂತಹ ಚಟುವಟಿಕೆಗಳು ಸಂಭವಿಸದಂತೆ ತಪ್ಪಿಸಲು ವಿವಿಧ ಪಾಲುದಾರರಿಗೆ ಈ ಕಾಯ್ದೆಯ ಬಗ್ಗೆ ಜಾಗೃತಿ ಮೂಡಿಸುವುದನ್ನು ಮುಂದುವರೆಸಲು ಸಚಿವಾಲಯವು ಪ್ರಾಧಿಕಾರಕ್ಕೆ ನಿರ್ದೇಶನ ನೀಡಿರುತ್ತದೆ.

ಮುಂದುವರೆದು, ಅಧ್ಯಕ್ಷರು, ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಇವರು ಜೀವವೈವಿಧ್ಯ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಹಿತದೃಷ್ಟಿಯಿಂದ ಜೀವ ವೈವಿಧ್ಯ ಅಧಿನಿಯಮದ ಬಗ್ಗೆ ವಿವಿಧ ಪಾಲುದಾರರಲ್ಲಿ ಜಾಗೃತಿ ಮೂಡಿಸಲು ಕ್ರಮವಹಿಸುವಂತೆ ಎಲ್ಲಾ ರಾಜ್ಯದ ಜೀವ

ವೈವಿಧ್ಯ ಮಂಡಳಿಗಳಿಗೆ ಅರೆ ಸರ್ಕಾರಿ ಪತ್ರ: WBA/LOW/Gen/28/12/13/18-9/3002, ದಿನಾಂಕ: 8.11.2018 ರಲ್ಲಿ ಸೂಚಿಸಿರುತ್ತಾರೆ.

ಜೈವಿಕ ವೈವಿಧ್ಯ ಅಧಿನಿಯಮ, 2005ರ ಸಂಜ್ಞೇಯತೆಯ ಸಂಬಂಧಿಸಿದ ವಿಷಯಗಳ ಬಗ್ಗೆ ಈ ಅಧಿನಿಯಮವು ಕೆಲವು ಕಾರ್ಯವಿಧಾನಗಳನ್ನು ವಿಧಿಸಿರುತ್ತದೆ. ಅಧಿನಿಯಮದ ಸೆಕ್ಷನ್ 61 ರನ್ವಯ ಅಪರಾಧದ ಸಂಜ್ಞೇಯತೆಯ ಬಗ್ಗೆ ಕೇಂದ್ರ ಸರ್ಕಾರ ಅಥವಾ ವಿಜ್ಞಾನಿ "ಸಿ" ದರ್ಜೆಗೆ ಕಡಿಮೆಯಿಲ್ಲದ ರಾಜ್ಯ ಜೀವ ವೈವಿಧ್ಯ ಮಂಡಳಿಯ ಅಧಿಕಾರಿಗಳು (ಎಸ್.ಒ. 2708(ಇ), ದಿನಾಂಕ: 17.11.2008) ಮತ್ತು ತಮ್ಮ ಕಾರ್ಯವ್ಯಾಪ್ತಿಗೆ ಸಂಬಂಧಿಸಿದ ಅರಣ್ಯ ಇಲಾಖೆಯ ವಲಯ ಅಧಿಕಾರಿಗಳ ದರ್ಜೆಗೆ ಕಡಿಮೆಯಿಲ್ಲದ ಅಧಿಕಾರಿಗಳು (ಎಸ್.ಒ. 120 (ಇ), ದಿನಾಂಕ: 07.01.2019 ರ ಅಧಿಸೂಚನೆಯನ್ವಯ) ಸೇರಿದಂತೆ ಕೇಂದ್ರ ಸರ್ಕಾರದಿಂದ ಈ ಬಗ್ಗೆ ಅಧಿಕೃತಗೊಳಿಸಲಾದ ಯಾರೇ ಪ್ರಾಧಿಕಾರಿ ಅಥವಾ ಅಧಿಕಾರಿ ಕ್ರಮ ಜರುಗಿಸಲು ಅವಕಾಶವಿರುತ್ತದೆ.

ಜೈವಿಕವೈವಿಧ್ಯ ಅಧಿನಿಯಮದ ಪ್ರಕರಣ 7 ರನ್ವಯ ಭಾರತೀಯ ನಾಗರೀಕರು/ ಸಂಸ್ಥೆಗಳು ಪೂರ್ವ ಮಾಹಿತಿಯನ್ನು (Prior Intimation) ನೀಡಬೇಕಾಗಿರುತ್ತದೆ. ಅವರು ಜೈವಿಕ ಸಂಪನ್ಮೂಲಗಳನ್ನು ಬಳಸುವ ಮುನ್ನ ರಾಜ್ಯ ನಿಯಮಾವಳಿಯ ಅರ್ಜಿ ನಮೂನೆ-I ರಲ್ಲಿ ಭಾರತೀಯ ನಾಗರಿಕರು/ ಸಂಸ್ಥೆಗಳು ಕರ್ನಾಟಕ ಜೀವ ವೈವಿಧ್ಯ ಮಂಡಳಿಗೆ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಆದರೆ ಕೆಲವು ಭಾರತೀಯರು/ ಸಂಸ್ಥೆಗಳು ಕಾಯ್ದೆಯ ಅನುಪಾಲನೆಗೆ ಅಪೇಕ್ಷಿತರಾಗಿದ್ದರೂ ಸಹ ಮಂಡಳಿಗೆ ತಡವಾಗಿ ಅಥವಾ ಮಂಡಳಿಯನ್ನು ಸಂಪರ್ಕಿಸದೇ ಇರುವುದು ಕಂಡು ಬಂದಿದೆ. ಹೀಗಾಗಿ, ಕಾಯ್ದೆಯ ಅನುಪಾಲನೆಗೆ ಅಪೇಕ್ಷಿತರಾಗಿರುವ ಭಾರತೀಯ ನಾಗರೀಕರು/ಸಂಸ್ಥೆಗಳ ಸದಾಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡು ಭಾರತೀಯ ನಾಗರಿಕರು/ ಸಂಸ್ಥೆಗಳ, ವ್ಯಕ್ತಿಗಳ ಮೇಲೆ ಯಾವುದೇ ನಿರ್ಬಂಧಗಳನ್ನು ಹೇರದೇ ಉತ್ತಮ ವಿಶ್ವಾಸದೊಂದಿಗೆ ಮಂಡಳಿಯನ್ನು ಸಂಪರ್ಕಿಸುವ, ತಿಳುವಳಿಕೆ ಇಲ್ಲದೇ ಅಥವಾ ಉದ್ದೇಶಪೂರ್ವಕವಾಗಿ ಕಾಯ್ದೆಯನ್ನು ಉಲ್ಲಂಘಿಸುವ ಇರಾದೆ ಇಲ್ಲದೇ ಇರುವವರಿಗೆ 60 ದಿನಗಳೊಳಗಾಗಿ ಕಾಯ್ದೆಯ ಕರಾರುಗಳನ್ನು ಪಾಲಿಸಲು ಅವಕಾಶ ನೀಡುವ ಅಗತ್ಯ ಕಂಡು ಬಂದಿರುತ್ತದೆ.

ಆದ್ದರಿಂದ, ಈ ಮೇಲಿನ ವಾಸ್ತವಾಂಶಗಳನ್ನು ಮತ್ತು ಅವಕಾಶಗಳನ್ನು ಗಣನೆಗೆ ತೆಗೆದುಕೊಂಡು ರಾಜ್ಯ ಸರ್ಕಾರವು ಈ ಅಧಿನಿಯಮದ ಸೆಕ್ಷನ್ 49 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿದೆ.

1. ಜೈವಿಕ ವೈವಿಧ್ಯ ಅಧಿನಿಯಮ, 2002 ರ ಸೆಕ್ಷನ್ 7 ರಡಿಯ ವ್ಯಾಪ್ತಿಯಲ್ಲಿ ಬರುವ, ಜೈವಿಕ ವೈವಿಧ್ಯ ಕಾಯ್ದೆಯ ನಿಬಂಧನೆಗಳು ಮತ್ತು ನಿಯಮಗಳನ್ನು ಪಾಲಿಸಲು ಅಪೇಕ್ಷಿತರಾಗಿರುವ ಭಾರತದ ಎಲ್ಲಾ ನಾಗರೀಕರಿಗೂ/ ಸಂಸ್ಥೆಗಳಿಗೂ ಕರ್ನಾಟಕ ಜೀವ ವೈವಿಧ್ಯ ಮಂಡಳಿಗೆ ಅರ್ಜಿ ನಮೂನೆ-1 ರಲ್ಲಿ ಪೂರ್ವ ಮಾಹಿತಿಯನ್ನು ಈ ನಿರ್ದೇಶನ ಹೊರಡಿಸಿದ 60 ದಿನಗಳೊಳಗಾಗಿ ಸಲ್ಲಿಸತಕ್ಕದ್ದು.

2. ಜೈವಿಕ ಸಂಪನ್ಮೂಲಗಳ ಬಳಕೆ, ಸಂಬಂಧಿತ ಜ್ಞಾನ ಮತ್ತು ಬಳಕೆ ಹಾಗೂ ಲಾಭ ಹಂಚಿಕೆಯು 2014 ರಿಂದ ಜಾರಿಗೆ ಬಂದಿದ್ದು, ಜೈವಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ಕುರಿತಂತೆ ನಿರ್ದೇಶನಗಳನ್ನು ಪರಿಗಣನೆಗೆ ತೆಗೆದುಕೊಂಡು ಕಾಯ್ದೆಯ ಅಂಶಗಳ ಅನುಪಾಲನೆಗೆ ಅವಕಾಶವನ್ನು ದಿನಾಂಕ: 15.09.2020 ರಿಂದ ದಿನಾಂಕ: 15.11.2020 ರವರೆಗೆ ನೀಡಲಾಗಿದೆ. ಯಾವ ಚಟುವಟಿಕೆಗಳು ಈ ಹಿಂದೆ ಅನುಮೋದನೆಯನ್ನು ಪಡೆಯಬೇಕಾಗಿತ್ತೋ ಅಂತಹ ಚಟುವಟಿಕೆಗಳಿಗೆ ಮಾತ್ರ ಕೆಲವೊಂದು ಷರತ್ತಿಗೊಳಪಟ್ಟು ಈ ಅವಕಾಶವನ್ನು ನೀಡಿದೆ.

3. ಜೈವಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ಅರ್ಜಿ ನಮೂನೆ-I ನ್ನು ಘಟನೋತ್ತರ ಅನುಮೋದನೆಗಾಗಿ (ex post facto) ಸಲ್ಲಿಸುವ ಎಲ್ಲಾ ಅರ್ಜಿಗಳನ್ನು ಮಂಡಳಿಯು ವಿಚಾರಣೆ ಮೂಲಕ ಪರಿಶೀಲಿಸುವುದು ಹಾಗೂ ಸೂಕ್ತವಾದ ಮತ್ತು ಸಮಂಜಸವಾದ ಸಮರ್ಥನೆಗಳನ್ನು ಮತ್ತು ಕಾರಣಗಳನ್ನು ದಾಖಲಿಸಿದ್ದಲ್ಲಿ, ಇಂತಹ ಅರ್ಜಿಗಳು ಮಂಡಳಿಗೆ ಒಪ್ಪಿಗೆಯಾದಲ್ಲಿ ಮಾತ್ರ ಅನುಮೋದನೆ ನೀಡಬಹುದು. ಇಂತಹ ಎಲ್ಲಾ ಘಟನೋತ್ತರ ಅನುಮೋದನೆಗಳ ಪ್ರಕರಣಗಳನ್ನು ಅರ್ಹತೆಯ ಆಧಾರದ ಮೇಲೆ ಪರಿಗಣಿಸತಕ್ಕದ್ದು ಹಾಗೂ ಯಾವ ವ್ಯಕ್ತಿ/ ಘಟಕವು ಸಾಮಾನ್ಯವಾಗಿ ಪೂರ್ವಾನುಮತಿಗಾಗಿ ನಿಗದಿತ ಸಮಯದಲ್ಲಿ ಅರ್ಜಿ ಸಲ್ಲಿಸಿದಾಗ ಪೂರ್ವಾನುಮತಿ ನೀಡಬಹುದಾದಂತಹ ಪ್ರಕರಣಗಳಲ್ಲಿ ಮಾತ್ರ ಭವಿಷ್ಯದ ಚಟುವಟಿಕೆಗಳಿಗಾಗಿ ಅನುಮತಿ ನೀಡುವುದನ್ನು ಖಚಿತಪಡಿಸಿಕೊಳ್ಳತ್ಕದ್ದು.

4. ನ್ಯಾಯಸಮ್ಮತವಾದ ವಿಚಾರಣೆ ಮತ್ತು ಮಂಡಳಿಯಿಂದ ತರ್ಕಬದ್ಧವಾದ ನಿರ್ಧಾರವನ್ನು ಕಟ್ಟುನಿಟ್ಟಾಗಿ ಅನುಸರಿಸುವುದು ಸೇರಿದಂತೆ ಸ್ವಾಭಾವಿಕ ನ್ಯಾಯ ತತ್ವಗಳನ್ನು ಪಾಲಿಸುವುದನ್ನು ಮಂಡಳಿಯು ಖಚಿತಪಡಿಸಿಕೊಳ್ಳತಕ್ಕದ್ದು.

ಮುಂದುವರೆದು, ಹಿಂದಿನ ಪ್ರಕರಣಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳು ಸೇರಿದಂತೆ ಮಂಡಳಿಯು ಈ ನಿರ್ದೇಶನ ಹೊರಡಿಸಿದ 60 ದಿನಗಳೊಳಗಾಗಿ ಸೂಕ್ತ ನಿರ್ಧಾರಗಳನ್ನು ಮತ್ತು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

ಈ ನಿರ್ದೇಶನಗಳು ಈ ಕೂಡಲೇ ಜಾರಿಗೆ ಬರುತ್ತದೆ.

ಕಾಯಿದೆಯ ಉದ್ದೇಶಗಳಾದ ಜೈವಿಕ ವೈವಿಧ್ಯತೆಯ ಸಂರಕ್ಷಣೆ, ಅದರ ಘಟಕಗಳ ಸುಸ್ಥಿರ ಬಳಕೆ ಮತ್ತು ವಾಣಿಜ್ಯ ಬಳಕೆಯಿಂದ ಉಂಟಾಗುವ ಪ್ರಯೋಜನಗಳ ಲಾಭ ಮತ್ತು ನ್ಯಾಯಸಮ್ಮತ ಹಂಚಿಕೆಗಳು ಸೇರಿದಂತೆ ಹಾಗೂ ಅದರ ನಿಬಂಧನೆಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಈ ನಿರ್ದೇಶನಗಳನ್ನು ನೀಡಲಾಗಿದೆ.

ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಈ ನಿರ್ದೇಶನಗಳನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

15/09/2020

**(ಮುರಳೀಧರ ಎಸ್. ತಳ್ಳಿಕೇರಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಜೀವಿಪರಿಸ್ಥಿತಿ ಮತ್ತು ಪರಿಸರ)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

ರವರಿಗೆ:

1. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಜೀವವೈವಿಧ್ಯ ಮಂಡಳಿ, ವನವಿಕಾಸ ಕಟ್ಟಡ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.
2. ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಇವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು,
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತು ಜೀವಿಶಾಸ್ತ್ರ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

5.) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಜೀವಿಪರಿಸ್ಥಿತಿ ಮತ್ತು ಪರಿಸರ), ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ. ಸಸ